ಶ್ರೀ ಪಿ. ಪಿ. ಹೆಗಡೆ.—(ಅ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಗ್ರಾಮ ಯಾವ ತಾಲ್ಲೂಕಿಗೆ ಸೇರ್ಪಟ್ಟಿದೆ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚಿಕ್ಕೋಡಿ ತಾಲ್ಲೂಕಿನಲ್ಲಿ ಬೆಣ್ಣಿಹಳ್ಳಿಯ ಒಂದು ಮಜರೆ ಗ್ರಾಮಕ್ಕೆ ಸೇರಿದೆ.

ಶ್ರೀ ಪಿ. ಪಿ. ಹೆಗಡೆ.—ಇದು ಬೆಣ್ಣಿಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದೆಯೇ ? ಇಲ್ಲಿ ಸ್ವತಂತ್ರ ಪಂಚಾಯಿತಿ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೆಣ್ಣಿಹಳ್ಳಿ ಗ್ರಾಮ ದಾಖಲೆ ಗ್ರಾಮ.

ಶ್ರೀ ಪಿ. ಪಿ. ಹೆಗಡೆ.—ಇದೆ ಹಾಗೆಯೇ ಇದು. ಇದನ್ನು ಯಾರೂ ನೋಡಿದಂತೆ ಇಲ್ಲ. ಇದು ಯಾವ ಗ್ರಾಮಕ್ಕೆ ಸೇರಿದೆ ಎನ್ನುವುದನ್ನು ತಿಳಿಸುತ್ತೀರಾ ? ಮತ್ತು ಇದು ಪ್ರತ್ಯೇಕ ಗ್ರಾಮಕ್ಕೆ ಸೇರಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಯಾವ ತಾಲ್ಲೂಕಿಗೆ ಸೇರಿದ್ದು, ಯಾವ ಪಂಚಾಯಿತಿಗೆ ಸೇರಿದ್ದು, ಯಾವ ದಾಖಲೆ ಗ್ರಾಮಕ್ಕೆ ಸೇರಿದ್ದು ಎಂದು ಹೇಳಿದೆ. ಹಿಂದೆ ಒಂದು ಸಾರಿ ಕಮತ್ಯಾನ ಹಟ್ಟಿ ದಾಖಲೆ ಗ್ರಾಮ ಸ್ವತಂತ್ರವಾಗಿ ಪ್ರತ್ಯೇಕ ಗ್ರಾಮ ಮಾಡಬೇಕು ಎನ್ನುವ ವಿಚಾರ ಆಗಿದ್ದಂಥ ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇನ್ನು ಚಿಕ್ಕೋಡಿ ಗ್ರಾಮಕ್ಕೆ ಸೇರಿದ ಕೆಲವು ಜಮೀನನ್ನು ಮತ್ತು ಹುಕ್ಕೇರಿ ತಾಲ್ಲೂಕಿನ ಯಾದಗುಡೆಗೆ ಸೇರಿದ ಗ್ರಾಮವನ್ನೂ ಪ್ರತ್ಯೇಕವಾಗಿ ಸೇರಿಸಿ ಪ್ರತ್ಯೇಕ ಗ್ರಾಮ ಮಾಡಬೇಕು ಎಂದು ಮನವಿ ಕೊಟ್ಟಿದ್ದಾರೆ. ಅದರ ಮೇಲೆ ಡೆಪ್ಯೂಟಿ ಕಮೀಷನರ್‌ಗೆ ಕಳುಹಿಸಿದ್ದೇವೆ. ಇದನ್ನು ಹೇಗೆ ಮಾಡುವುದಕ್ಕೆ ಸಾಧ್ಯವಿದೆ ಅದಕ್ಕೆ ವಿವರವನ್ನು ಕಳಿಸಿಕೊಡಿ ಎಂದು ಅಲ್ಲಿಗೆ ಕಳಿಸಲಾಗಿದೆ. ಅದು ಬಂದ ಕೂಡಲೇ ನೂಕ್ಕ ಕಂಡು ಬಂದಲ್ಲಿ ಪ್ರತ್ಯೇಕ ಗ್ರಾಮ ಮಾಡುವುದಕ್ಕೆ ಮಾಡುತ್ತೇವೆ.

1-30 P. M.

Extension of Service to officials

577. Sri K. SIDDAIAH (Santhemaranahalli).—

Will the Chief Minister be pleased to state:—

(*a*) the number of extension of service given to Officers holding Gazetted and non-gazetted posts during 1970, 1971 and 1972 (Gazetted and Non-gazetted) ;

(*b*) among them, the number of Officers belonging to Seheduled Castes/Scheduled Tribes ;

(*c*) the reasons for giving extensions of service to these officers ?

Sri D. DEVARAJ URS (Chief Minister).—

(*a*) *Year*	*Gazetted*	*Non-gazetted*
1970	7	7
1971	14	6
1972	14	7
Total...	35	20

(b) Gazetted
Non-gazetted

(c) In the interest of Public Service.

ಶ್ರೀ ಕೆ. ಸಿದ್ದಯ್ಯ– ನನ್ನ ಮೊದಲನೆ ಪ್ರಶ್ನೆಗೆ ಉತ್ತರವಾಗಿ 35 ಜನ ರಾಜ್ಯ ಪತ್ರಾಂಕಿತ ಅಧಿಕಾರಿಗಳಿಗೆ ಮತ್ತು 20 ಜನ ರಾಜ್ಯ ಪತ್ರಾಂಕಿತರಲ್ಲದ ಅಧಿಕಾರಿಗಳಿಗೆ ಸೇವಾ ವಿಸ್ತರಣೆಯನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ ? ಸಾರ್ವಜನಿಕ ಹಿತದೃಷ್ಟಿಯಿಂದ ಈ ರೀತಿ ಕೊಡಲಾಗಿದೆ ಎಂದು ಹೇಳಿದ್ದೀರಿ ; ಅಂದರೆ ಈ ರೀತಿ ಸೇವೆಯನ್ನು ವಿಸ್ತರಣೆ ಮಾಡದಿದ್ದರೆ ಕಛೇರಿಯ ಕೆಲಸ ಚೆನ್ನಾಗಿ ನಡೆಯುವುದಿಲ್ಲವೆಂದು ಕೊಟ್ಟಿದ್ದೀರಾ ಅಥವಾ ಮೆಟೀರಿಯರ್ ಫ್ಯಾಕ್ಟ್ಸ್ ಮೇಲೆ ತೀರ್ಮಾನಕ್ಕೆ ಬಂದು ಸೇವಾ ವಿಸ್ತರಣೆಯನ್ನು ಕೊಟ್ಟಿದ್ದೀರಾ ?

† ಶ್ರೀ ಡಿ. ದೇವರಾಜ ಅರಸ್.– ಮೆಟೀರಿಯರ್ ಫ್ಯಾಕ್ಟ್ಸ್ ಮೇಲೆಯೇ ಹೆಚ್ಚಾಗಿ ಎಕ್ಸ್‌ಟೆನ್‌ಷನ್ ಕೊಡುವುದು. ಮತ್ತು ಈ ರೀತಿ ಕೊಡುವುದು ಚೆಕ್ಕಿಕರ್ ಮತ್ತು ಅಕೌಂಟ್ಸ್ ಇರಾಖೆಗಳಲ್ಲಿ ಬೇರೆ ಜನರು ಸಧ್ಯಕ್ಕೆ ಸಿಗುವುದಿಲ್ಲವೆಂದು ಕಂಡುಬಂದಾಗ ಎಕ್ಸ್‌ಟೆನ್‌ಷನ್ ಕೊಡುತ್ತೇವೆ. ಕೆಲವು ಸಲ ಅಧಿಕಾರಿಗಳ ಹುಟ್ಟಿದ ತಾರೀಖು ಬದಲಾವಣೆಯಾದ ಪ್ರಯುಕ್ತ ಸೇವಾ ವಿಸ್ತರಣೆ ಸಿಕ್ಕಿರುತ್ತದೆ.

ಶ್ರೀ. ಕೆ. ಸಿದ್ದಯ್ಯ.—ಈ ರೀತಿ ಎಕ್ಸ್‌ಟೆನ್‌ಷನ್ ಕೊಡುವಾಗ ಹಿಂದುಳಿದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ಹಿಂದುಳಿದ ಹೆಚ್ಚು ಜನರಿಗೆ ಕೊಡುತ್ತೀರಾ ? ಮತ್ತು ಈ ವಿಚಾರದಲ್ಲಿ ಯಾವ ರೀಪೋರ್ಟನ್ನು ಅನುಸರಿಸುತ್ತಿದ್ದೀರಿ ? ಅಲ್ಲದೆ ಹಿಂದುಳಿದ ಜನರಿಗೆ ಸೇವೆಯನ್ನು ವಿಸ್ತರಣೆ ಮಾಡುವುದು ಸೂಕ್ತ ಎಂದು ಏನಾದರು ಸರ್ಕಾರದವರು ಭಾವಿಸಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.— ಸಾಮಾಜಿಕ ನ್ಯಾಯ ಇದರಿಂದ ದೊರೆಯುವುದಿಲ್ಲ. ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂದರೆ ಕೆಲಸಗಳನ್ನು ಹೆಚ್ಚಾಗಿ ಕೊಡಬೇಕಾಗುತ್ತದೆ. ಸರ್ಕಾರದ ಸೇವಾ ದೃಷ್ಟಿಯಿಂದ ಯಾರಿಗೆ ಅವರ ಸೇವೆಯನ್ನು ವಿಸ್ತರಿಸಬೇಕೆಂದು ಕಂಡುಬರುತ್ತದೋ ಅಂತಹವರಿಗೆ ಮಾತ್ರ ಈಗ ಕೊಡಲಾಗುತ್ತಿದೆ. ರಾಜ್ಯಾಂಗದ ಪ್ರಕಾರ ಎಲ್ಲ ಮಟ್ಟಗಳಲ್ಲಿಯೂ ಮೀಸಲು ಹುದ್ದೆಗಳನ್ನು ಕೊಟ್ಟುಕೊಂಡು ಬಂದರೆ ಸಾಮಾಜಿಕ ನ್ಯಾಯ ಸಿಗುತ್ತದೆ ಹೊರತು ಸೇವಾ ವಿಸ್ತರಣೆಯ ಸಮಯದಲ್ಲಿಯೂ ಸಹ ಪ್ರಪೋರ್ಷನೇಟ್ ಆಗಿ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಾರ್ವಜನಿಕ ದೃಷ್ಟಿಯಿಂದ ಈ ರೀತಿ ಸೇವಾ ವಿಸ್ತರಣೆ ಮಾಡಲಾಗುತ್ತದೆಂದು ಹೇಳಿದ್ದೀರಿ. ಈ ರೀತಿ ಕೊಡುವುದರಿಂದ ಆ ಸ್ಥಾನಗಳಿಗೆ ಪ್ರಮೋಷನ್ ಆಗಿ ಬರುವವರಿಗೆ ತೊಂದರೆಯಾಗುವುದರಿಂದ ಈ ರೀತಿ ಸೇವಾ ವಿಸ್ತರಣೆಯನ್ನು ಕೊಡುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಏಕೆಂದರೆ ಅನೇಕ ಸಲ ಸಾರ್ವಜನಿಕ ಹಿತಕ್ಕಿಂತಲೂ ಬೇರೆ ರೀತಿಯ ಪ್ರಭಾವಕ್ಕೆ ಒಳಗಾಗಿ ಕೊಡುತ್ತಿರುವುದು ಕಂಡುಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಹೇರಳವಾಗಿ ಈ ರೀತಿ ಎಕ್ಸ್‌ಟೆನ್‌ಷನ್ ಕೊಡುವುದು ಸರಿಯಲ್ಲ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಈಗ ಕೊಡುತ್ತಿರುವುದು ರೇರ್ ಕೇಸಸ್‌ನಲ್ಲಿ ಮಾತ್ರ. ಸರ್ಕಾರದ ಕೆಲಸದ ದೃಷ್ಟಿಯಿಂದ ಕೊಡಬೇಕಾದ ಸಂದರ್ಭದಲ್ಲಿ ಕೊಡುತ್ತೇವೆಯೇ ಹೊರತು ಯಾರ ಹಿತವನ್ನು ಕಾಯುವುದಕ್ಕೆ ನಾವು ಕೊಡುತ್ತಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಚೆಕ್ಕಿಕರ್ ಇರಾಖೆಗೆ ಸಂಬಂಧಪಟ್ಟಂತೆ ಈ ರೀತಿ ಸೇವಾ ವಿಸ್ತರಣೆಯನ್ನು ಕೊಡಲಾಗುತ್ತಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು ಈಗ ಇಲ್ಲಿ ಏನು 35 ಜನ ರಾಜ್ಯ ಪತ್ರಾಂಕಿತ ಅಧಿಕಾರಿಗಳಿಗೆ ಮತ್ತು 20 ಜನ ರಾಜ್ಯ ಪತ್ರಾಂಕಿತರಲ್ಲದ ಅಧಿಕಾರಿಗಳಿಗೆ ಸೇವಾ ವಿಸ್ತರಣೆಯನ್ನು ಕೊಡಲಾಗಿದೆ. ಈ ಪೈಕಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರಿಂದ ಎಷ್ಟು ಜನರು ಕೇಳಿಕೊಂಡಿದ್ದರು. ಆ ರೀತಿ ಕೇಳಿ ಕೊಂಡವರಿಗೆ ಸೇವೆಯನ್ನು ವಿಸ್ತರಣೆ ಮಾಡಲು ನಿರಾಕರಣೆ ಮಾಡಲು ಇದ್ದಂಥ ಅನರ್ಹತೆ ಏನು ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಕಾರ್ಮಿಕ ಜನಾಂಗದವರೇ ಅಲ್ಲ, ಸೇವೆಯಿಂದ ಯಾರು ಯಾರು ಬಿಡುಗಡೆಯಾಗುತ್ತಾರೊ ಅವರೆಲ್ಲರೂ ಸಹ ಸೇವೆಯ ವಿಸ್ತರಣೆಯನ್ನು ಕೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ, ಆದರೆ ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಿಲ್ಲ.

Sri ABDUL KHUDUS ANWAR.—Will the same facilities be extended to industrial workers ?

Sri D. DEVARAJ URS.—Industrial workers are different from Government servants.

ಶ್ರೀ ಕೆ. ಸಿದ್ದಯ್ಯ.—ಇನ್ನು ಮುಂದೆ ಯಾರಿಗಾದರೂ ಸೇವಾ ವಿಸ್ತರಣೆಯನ್ನು ಮಾಡುವಾಗ, ಆ ರೀತಿ ಮಾಡದಿದ್ದರೆ ಇರಾಖೆಯ ಕೆಲಸವೇ ನಡೆಯುವುದಿಲ್ಲವೆಂದು ಕಂಡು ಬಂದರೆ ಮಾತ್ರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪ್ರತಿಯೊಂದು ಕೇಸ್‌ನಲ್ಲಿಯೂ ಸರ್ಕಾರದ ದೃಷ್ಟಿಯಿಂದ ಅಗತ್ಯವಿದೆ ಎಂದು ಕಂಡುಬಂದಾಗ ಮಾತ್ರ ಆಲೋಚನೆ ಮಾಡಿ ಕೊಡುತ್ತೇವೆಯೇ ಹೊರತು ಸರ್ವೇ ಸಾಧಾರಣವಾಗಿ ಎಲ್ಲರಿಗೂ ಎಕ್ಸ್‌ಟೆನ್‌ಷನ್ ಕೊಡಬಾರದು ಎಂಬುದೇ ಸರ್ಕಾರದ ಉದ್ದೇಶ.

ELECTION TO MYSORE MUNICIPAL COUNCIL

583. Sri K. PUTTASWAMY (Chamundeswari).—

Will the Minister for Municipal Administration be pleased to state.—

(*a*) whether it is a fact that non-completion of delimitation of Divisions on the basis of 1971 population was the reason for not holding elections to Mysore City Municipality in January 1972 ;

(*b*) the date on which the delimitation of the Divisions was done last ;

(*c*) whether there was any legal difficulty in holding the election without fresh delimitation ;

(*d*) whether timely steps were not taken by the Government in calling for the opinion of the City Municipal Council on the draft proposals for fresh delimitation ;

(*e*) whether the opinion of the Municipal Council was not conveyed to them in time ;

(*f*) the reasons for failure to take further action thereon and to hold election ;

(*g*) the reasons for not extending the term of the Municipal Council by another year allowed under the Act but to entrust the same to an Administrator ;

(*h*) whether the Government is considering the question of appointing an Advisory Body to assist the Administrator ;

(*i*) if so, the reasons for the same ?